**ದಿನಾಂಕ 05.06.2017ರಂದು ವಿಕಾಸಸೌಧದ ಕೊಠಡಿ ಸಂಖ್ಯೆ-222ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿದ ಸಂಜೀವಿನಿ – ಕರ್ನಾಟಕ ರಾಜ್ಯ ಗ್ರಾಮೀಣಾ ಜೀವನೋಪಾಯ ಸಂವರ್ಧನಾ ಸಂಸ್ಥೆಯ (ಕೆ.ಎಸ್.ಆರ್.ಎಲ್.ಪಿ.ಎಸ್) ಏಳನೇಯ ಕಾರ್ಯಕಾರಿ ಸಮಿತಿ ಸಭೆಯ ನಡವಳಿಗಳು :**

<u>ಸಭೆಯಲ್ಲಿ ಹಾಜರಿದ್ದವರು:</u>

| | | |
|---|---|---|
| 1 | ಶ್ರೀ. ಟಿ.ಎಂ. ವಿಜಯಭಾಸ್ಕರ್,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು | ಅಧ್ಯಕ್ಷರು |
| 2 | ಶ್ರೀ. ಸಂಜೀವ್ ಕುಮಾರ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,<br>ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ. | |
| 3 | ಡಾ॥ ಎನ್. ನಾಗಾಂಬಿಕ ದೇವಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | |
| 4 | ಶ್ರೀ. ಸಮೀರ್ ಶುಕ್ಲ, ಆಯುಕ್ತರು,<br>ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | |
| 5 | ಶ್ರೀ. ಹೆಚ್. ಪ್ರಕಾಶ್, ಅಪರ ನಿರ್ದೇಶಕರು,<br>ಎಂಎಸ್ಎಂಇ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ | |
| 6 | ಡಾ॥ ಆರ್.ಕೆ. ಚೆಲುವಯ್ಯ, ಅಪರ ನಿರ್ದೇಶಕರು,<br>ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ | |
| 7 | ಶ್ರೀ. ಪುರುಷೋತ್ತಮ್ ಸಿಂಗ್ ಬಿ.ಹೆಚ್,<br>ವಿಶೇಷ ಅಧಿಕಾರಿ, ಜಿಲ್ಲಾ ಪಂಚಾಯತ್, ಹಣಕಾಸು ಇಲಾಖೆ | |
| 8 | ಶ್ರೀ. ಕೆ.ಪಿ. ಚಂದ್ರಹಾಸ್, ಉಪಕಾರ್ಯದರ್ಶಿಗಳು,<br>ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ | |
| 9 | ಶ್ರೀ. ಕೆ. ಚಂದ್ರಶೇಖರಪ್ಪ,<br>ಎಸ್ಎಲ್‌ಬಿಸಿ ಹಿರಿಯ ವ್ಯವಸ್ಥಾಪಕರು, ಸಿಂಡಿಕೇಟ್ ಬ್ಯಾಂಕ್ | |
| 10 | ಡಾ॥ ಎನ್. ಬಸವರಾಜು, ರಾಜ್ಯ ಸಂಯೋಜಕರು, ಆತ್ಮ ಯೋಜನೆ, ಕೃಷಿ ಇಲಾಖೆ | |
| 11 | ಶ್ರೀ. ಬಸವರಾಜು,<br>ಮುಖ್ಯ ಕಾರ್ಯಾಚರಣಾ ಅಧಿಕಾರಿ, ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ | |

ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಯಿತು

1. ಹಿಂದಿನ ಸಭೆಯ ನಡವಳಿಗಳ ಮೇಲೆ ಕೈಗೊಂಡ ಕ್ರಮ :
   ದಿನಾಂಕ 02.03.2016 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಜರುಗಿದ ಆರನೇ ಕಾರ್ಯಕಾರಿ ಸಮಿತಿ ಸಭೆಯ ನಡವಳಿಗಳ ಮೇಲೆ ಕೆಎಸ್ಆರ್ಎಲ್‌ಪಿಎಸ್‌ನಿಂದ ಕೈಗೊಂಡ ಕ್ರಮದ ಬಗ್ಗೆ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಲಾಯಿತು.
2. ಕೆಎಸ್ಆರ್ಎಲ್‌ಪಿಎಸ್ – ಸಂಜೀವಿನಿ ಸಂಸ್ಥೆಯ ಕೆಳಗಿನ ಸಮಿತಿಗಳಲ್ಲಿ ಹೊಸದಾಗಿ ರಚಿಸಿದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಪ್ರತಿನಿಧಿತ್ವ ಕುರಿತು

   a. ರಾಜ್ಯ ಮಟ್ಟದ ಯೋಜನಾ ಅನುಮೋದನಾ ಸಮಿತಿ :

ಕಮಿಂ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ:ಕೆಎಸ್‌ಆರ್‌ಎಲ್‌ಪಿಎಸ್/ಸಿಎಸ್‌ಸಿ/72/2013-14 ದಿನಾಂಕ 19.08.2013ರಲ್ಲಿ ರಚಿತಗೊಂಡ ರಾಜ್ಯ ಮಟ್ಟದ ಯೋಜನಾ ಅನುಮೋದನಾ ಸಮಿತಿಯಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಅ &ಪಂ.ರಾ ಇಲಾಖೆ ಅವರ ಅಧ್ಯಕ್ಷತೆಯಲ್ಲಿ ರಚಿಸಿರುವುದನ್ನು ಬದಲಾಯಿಸಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಎಂದು ಪುನರ್ ರಚಿಸುವುದು. ಹಾಗೆಯೇ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಅ &ಪಂ.ರಾ ಇಲಾಖೆ ಅವರನ್ನು ಸದಸ್ಯರನ್ನಾಗಿ ಮುಂದುವರಿಸುವುದು. ಇತರ ಸದಸ್ಯರನ್ನು ಇದ್ದಂತೆಯೇ ಮುಂದುವರಿಸಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಸರ್ಕಾರಿ ಆದೇಶ ಹೊರಡಿಸಲು ಕ್ರಮ ಜರುಗಿಸುವುದು.

b. ಕೆಎಸ್‌ಆರ್‌ಎಲ್‌ಪಿಎಸ್‌ನ ಕಾರ್ಯಕಾರಿ ಸಮಿತಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅವರನ್ನು ಹೆಚ್ಚುವರಿ ಸದಸ್ಯರನ್ನಾಗಿ ಸೇರ್ಪಡೆಗೊಳಿಸಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಸರ್ಕಾರಿ ಆದೇಶ ಹೊರಡಿಸುವುದು.

c. ಕೆಎಸ್‌ಆರ್‌ಎಲ್‌ಪಿಎಸ್‌ನ ಸರ್ವಸದಸ್ಯರ ಸಮಿತಿ ಸಭೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಅವರನ್ನು ಸದಸ್ಯರನ್ನಾಗಿ ಸೇರ್ಪಡೆಗೊಳಿಸಲು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಿಂದ ಸರ್ಕಾರಿ ಆದೇಶ ಹೊರಡಿಸುವುದು.

3. ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಡಿಡಿಯುಜಿಕೆವೈ) ಯಡಿ ಅನುಷ್ಠಾನ ಸಂಸ್ಥೆಗಳಿಂದ ಸಲ್ಲಿಕೆಯಾಗಿರುವ ಯೋಜನೆಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ನೀಡುವ ಕುರಿತು

ಈ ಸಂಬಂಧ ಕಾರ್ಯಕಾರಿ ಸಮಿತಿಯು ಸದರಿ ಸಂಸ್ಥೆಗಳ ಯೋಜನಾ ವರದಿಗಳನ್ನು ಪರಿಶೀಲಿಸಿ ಎನ್‌ಐಆರ್‌ಡಿ, ಹೈದ್ರಾಬಾದ್ ಸಂಸ್ಥೆ ಶಿಫಾರಸ್ಸು ಮಾಡಿದ್ದು, ಕೇಂದ್ರ ಸರ್ಕಾರದ ಪ್ರತಿನಿಧಿ ಹಾಗು ಎನ್‌ಐಆರ್‌ಡಿ ಪ್ರತಿನಿಧಿ ಉಪಸ್ಥಿತರಿದ್ದ ರಾಜ್ಯ ಮಟ್ಟದ ಯೋಜನಾ ಅನುಮೋದನಾ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ಯೋಜನಾ ವರದಿಗಳ ಮಾಹಿತಿ ಪಡೆದು ರೂ.15 ಕೋಟಿ ಮೀರಿದ ಯೋಜನೆಗಳಿಗೆ ಕೆಳಗಿನಂತೆ ಅನುಮೋದಿಸಿತು:

| ಕ್ರಮ. ಸಂಖ್ಯೆ | ಯೋಜನಾ ಅನುಷ್ಠಾನ ಸಂಸ್ಥೆಯ ಹೆಸರು | ಅನುಮೋದನೆಗೆ ಪ್ರಸ್ತಾಪಿಸಿದ ಗುರಿ | ಯೋಜನಾ ಅಂದಾಜು ವೆಚ್ಚ (ರೂ. ಕೋಟಿಗಳಲ್ಲಿ) | ಪಿಎಸ್ಎ ಯಿಂದ ಅನುಮೋದನೆಗೊಂಡ ದಿನಾಂಕ | ಕಾರ್ಯಕಾರಿ ಸಮಿತಿಯ ನಿರ್ಣಯ |
|---|---|---|---|---|---|
| 1 | ORION EDUTECH | 2800 | 30.65 | 25.03.2017 | ಅನುಮೋದಿಸಲಾಯಿತು |

| ಕ್ರಮ. ಸಂಖ್ಯೆ | ಯೋಜನಾ ಅನುಷ್ಠಾನ ಸಂಸ್ಥೆಯ ಹೆಸರು | ಅನುಮೋದನೆಗೆ ಪ್ರಸ್ತಾಪಿಸಿದ ಗುರಿ | ಯೋಜನಾ ಅಂದಾಜು ವೆಚ್ಚ (ರೂ. ಕೋಟಿಗಳಲ್ಲಿ) | ಪಿಎಸ್‌ಎ ಯಿಂದ ಅನುಮೋದನೆಗೊಂಡ ದಿನಾಂಕ | ಕಾರ್ಯಕಾರಿ ಸಮಿತಿಯ ನಿರ್ಣಯ |
|---|---|---|---|---|---|
| | PVT LTD | | | | |
| 2 | MAN POWER GROUP SERVICES INDIA PVT LTD | 2380 | 24.27 | 25.03.2017 | ಅನುಮೋದಿಸಲಾಯಿತು |
| 3 | MPTA EDUCATION LTD | 2000 | 21.91 | 25.03.2017 | ಅನುಮೋದಿಸಲಾಯಿತು |
| 4 | SURYA WIRES PRIVATE LIMITED | 2000 | 26.26 | 25.03.2017 | ಅನುಮೋದಿಸಲಾಯಿತು |
| 5 | APOLLO MED SKILLS LTD | 1500 | 24.97 | 02.06.2017 | ಅನುಮೋದಿಸಲಾಯಿತು |
| 6 | HIMSTSINGKA SEIDE LTD | 3500 | 20.08 | 02.06.2017 | ಅನುಮೋದಿಸಲಾಯಿತು |
| 7 | CADMAXX SOLUTIONS PVT. LTD | 1500 | 15.53 | 02.06.2017 | ಯೋಜನಾ ವೆಚ್ಚ ರೂ.15.00 ಕೋಟಿಗಳಿಗೆ ಮೀರದಂತೆ ಮಿತಿಗೊಳಿಸಿ ಅನುಮೋದಿಸಲಾಯಿತು |
| 8 | VISHWA BHARATI EDUCATIONAL DEVELOPMENT TRUST | 1500 | 09.13 | 02.06.2017 | ಸಭೆಯಲ್ಲಿ ಅವಗಾಹಿಸಲಾಯಿತು |
| 9 | WAZIR ADVISORS PVT. LTD | 1400 | 14.03 | 02.06.2017 | ಸಭೆಯಲ್ಲಿ ಅವಗಾಹಿಸಲಾಯಿತು |
| 10 | KAPSTON FACILITIES MANAGEMENT PVT. LTD | 1001 | 09.59 | 02.06.2017 | ಸಭೆಯಲ್ಲಿ ಅವಗಾಹಿಸಲಾಯಿತು |
| 11 | INVOLUTE INSTITUTE OF TECH. TRAINING PVT. LTD | 750 | 08.67 | 02.06.2017 | ಸಭೆಯಲ್ಲಿ ಅವಗಾಹಿಸಲಾಯಿತು |
| 12 | SRI. MANJUNATHA EDUCATION TRUST | 320 | 01.91 | 02.06.2017 | ಸಭೆಯಲ್ಲಿ ಅವಗಾಹಿಸಲಾಯಿತು |

ರೂ.15.00 ಕೋಟಿಗಳಿಗಿಂತಲೂ ಮಿಗಿಲಾಗಿರುವ ಮೇಲಿನ ಪಟ್ಟಿಯಲ್ಲಿ ತೋರಿಸಲಾದ ಕ್ರ.ಸಂ.1 ರಿಂದ 7 ರ ವರೆಗಿನ ಪ್ರಸ್ತಾವನೆಗಳಿಗೆ ಸಮಿತಿ ಅನುಮೋದಿಸಿ, ರೂ.15.00 ಕೋಟಿಗಳಿಗಿಂತಲಲೂ ಕಡಿಮೆಯಾಗಿರುವ ಯೋಜನಾ ವರದಿಗಳು ರಾಜ್ಯ ಮಟ್ಟದ ಯೋಜನಾ ಅನುಮೋದನಾ ಸಮಿತಿಯಿಂದ ಅನುಮೋದನೆಯಾಗಿರುವುದನ್ನು ಅವಗಾಹಿಸಲಾಯಿತು. ಹಾಗೆಯೇ ಈ ವಿಷಯವನ್ನು ಸಚಿವ ಸಂಪುಟಕ್ಕೆ ಅವಗಾಹನೆಗೆ ಹಾಗು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ

ಅವಗಾಹನೆಗೆ ಸಲ್ಲಿಸಲು ಸೂಚಿಸಲಾಯಿತು. ಈ ಯೋಜನೆಗಳ ಸಂಬಂಧ ಮುಂದಿನ ಕ್ರಮ ಕೈಗೊಂಡು ನಿಗದಿಪಡಿಸಿದ ಗುರಿ ಸಾಧನೆಗೆ ಶ್ರಮಿಸಲು ಸಭೆಯಲ್ಲಿ ಸೂಚಿಸಲಾಯಿತು.

ಧನ್ಯವಾದಗಳೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

(ತ.ಮ.ವಿಜಯ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ
ಅಭಿವೃದ್ಧಿ ಆಯುಕ್ತರು ಹಾಗೂ
ಕಾರ್ಯಕಾರಿ ಸಮಿತಿ ಅಧ್ಯಕ್ಷರು
(ಕೆಎಸ್ಆರ್ಎಲ್‌ಪಿಎಸ್)

ಸಂಖ್ಯೆ: ಕೆಎಸ್ಆರ್ಎಲ್‌ಪಿಎಸ್/ಹೆಚ್ ಆರ್/04/2014-15 ದಿನಾಂಕ: 05-06-2017

ಪ್ರತಿಯನ್ನು ಇವರುಗಳಿಗೆ :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ಬೆಂಗಳೂರು.
9. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಕೌಶಲ್ಯ ಭವನ, ಐಟಿಐ ಕ್ಯಾಂಪಸ್, ಹೊಸೂರು ರಸ್ತೆ, ಬೆಂಗಳೂರು.
10. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಇಲಾಖೆ, ಆನಂದ್ ರಾವ್ ವೃತ್ತ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು.
12. ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್, ಬೆಂಗಳೂರು.
13. ಸಂಚಾಲಕರು, ಎಸ್.ಎಲ್.ಬಿ.ಸಿ., ಸಿಂಡಿಕೇಟ್ ಬ್ಯಾಂಕ್, ಕೇಂದ್ರ ಕಛೇರಿ, ಗಾಂಧಿನಗರ, ಬೆಂಗಳೂರು.
14. ಕಛೇರಿ ಪ್ರತಿ / ರಕ್ಷಾ ಕಡತ